ಮೈಸೂರು ಫಾರೆಸ್ಟ್ ಇಲಾಖೆ.

ಇಸ್ತಿಹಾರ್‌ನಾಮೆ.

ಕೋಲಾರ್ ಡಿಸ್ಟ್ರಿಕ್ಟಿನಲ್ಲಿರುವ ಇದರಡಿ ಕಂಡ ಜಂಗಲ್‌ಗಳಲ್ಲಿ ಬಿದರು, ಗಳುವನ್ನು ಕತರಾಯಿಸಿ ಜಮಾಯಿಸಿ ಖರೀದಿಗೆ ತೆಗೆದುಕೊಳ್ಳತಕ್ಕ ಬಗ್ಗೆ ದರಖಾಸ್ತುಗಳು ಕೋರಲ್ಪಟ್ಟಿವೆ.

(1)	ನಂಬೀ ಫಾರೆಸ್ಟ್	ತಾಲ್ಲೂಕು ಚಿಕ್ಕಬಳ್ಳಾಪುರ.
(2)	ನರಸಿಂಹದೇವರ ಬೆಟ್ಟದ ಫಾರೆಸ್ಟಿನಲ್ಲಿ II ಎರಡನೇ ಬ್ಲಾಕ್	ಡಿಟೋ.
(3)	ರಾಯಲ್‌ಪಾಡ್ ಫಾರೆಸ್ಟಿನಲ್ಲಿ ಮುದಿವಡಗು ಬ್ಲಾಕ್	ಚಿಂತಾಮಣಿ.
(4)	ನೂಟವೆ ಡಿಸ್ಟ್ರಿಕ್ಟ್ ಜಂಗಲ್	ಮಾಲೂರ್.

2. ತಮ್ಮಾಂ ದರಖಾಸ್ತುಗಳನ್ನೂ ಲಕ್ಕೋಟೆಗಳಲ್ಲಿ ಹಾಕಿ ಮೊಹರ್‌ಮಾಡಿ ಕೋಲಾರ್ ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸಿಗೆ ರವಾನಿಸಬೇಕಲ್ಲದೆ ಪ್ರತಿ ದರಖಾಸ್ತಿನೊಂದಿಗೂ (50) ರೂಪಾಯಿಗಳನ್ನು ಠೇವಣಿ ಬಗ್ಗಾಗಿ ಕಳುಹಿಸಬೇಕಾಗಿರುತ್ತೆ. ಖಾಲೀ ದರಖಾಸ್ತುಗಳನ್ನು ಹಿಡಿಯುವದಿಲ್ಲ. ಇದೇ ಇಸವಿ ಮೇ ಮಾಹೆ ಆಖೈರ್ ವರಿಗೆ ದರಖಾಸ್ತುಗಳನ್ನು ಬರಮಾಡಿಕೊಂಡು ಜೂ ಗುರ್ರೇ ತನೀಖಿನಲ್ಲಿ ಫೈಸಲ್ಮಾಡಲಾಗುತ್ತೆ.

3. ಇದೇ ಇಸವಿ ಜುಲೈ ಗುರ್ರೇ ಲಾಗಾಯತು 97ನೇ ಜೂ ಆಖೈರ್ ವರೆಗೆ ಸಲ್ಲುವ 1896—97ನೇ ಸಾಲ್‌ನಲ್ಲಿ ಯಾವ ಜಂಗ್ಲಿಯಿಂದ ಎಷ್ಟು ಬಿದರುಗಳನ್ನ ಕಡಿದು ತೆಗೆದುಕೊಂಡು ಹೋಗುವದಕ್ಕೆ ಬಪ್ಪುತ್ತಾರೋ ಮತ್ತು (1000) ಒಂದು ಸಾವಿರ ಬೊಂಬುಗಳಿಗೆ ಯಾವ ದರ ಕೊಡುವದಕ್ಕೆ ಕಬೂಲ್ ಇಧಾರೆ ಎಂಬ ಎರಡು ಸಂಗತಿಗಳನ್ನೂ ದರಖಾಸ್ತು ದಾರರು ಸ್ಪಷ್ಟವಾಗಿ ನಮೂದಿಸಬೇಕು. ಹೆಚ್ಚು ದರ ನಮೂದುಳ್ಳ ಅಥವಾ ಇನ್ಯಾವ ದರಖಾಸ್ತನ್ನಾದರೂ ಯಾವ ಕಾರಣವನ್ನೂ ಹೇಳದೆ ಇಷ್ಟಬಂದರೆ, ಅಂಗೀಕರಿಸುವದಕ್ಕೂ ನಿಂತದ್ದನ್ನ ತಿರಸ್ಕರಿಸುವದಕ್ಕೂ ಸಹ, ಡೆಪ್ಯುಟಿ ಕಮ್ಮಿಷನರವರು ಮೊಖ್ತಾರ್‌ರಾಗಿದ್ದಾರೆ.

4. ತಿರಸ್ಕರಿಸಲ್ಪಡುವ ದರಖಾಸ್ತುದಾರ್‌ರುಗಳಿಂದ ಇಡಲ್ಪಟ್ಟ ಠೇವಣಿ ಮೊಬಲಗು ವಾಪಸು ಮಾಡಲ್ಪಡುತ್ತದೆ. ದರಖಾಸ್ತುಗಳು ಡೆಪ್ಯುಟಿ ಕಮ್ಮಿಷನರವರಿಂದ ಮಂಜೂರಾದ ನಂಗತಿಯನ್ನ ಸದರೀ ದರಖಾಸ್ತುದಾರರಿಗೆ ತಿಳಿಸಿದ ಕೂಡ್ಲೆ ಕಂಟ್ರಾಕ್ಟಿನ ಪ್ರಕಾರ ಕೆಲಸ ಪೇರೆಗೆ ನಡೆದುಕೊಳ್ಳತಕ್ಕ ಖಾತರೀ ಬಗ್ಗಾಗಿ ಮೊದಲು ಇಟ್ಟಿದ್ದ (50) ಐವತ್ತು ರೂಪಾಯಿಗಳಲ್ಲದೆ ಜಾಸ್ತಿಯಾಗಿ (250) ಎರಡುನೂರ ಐವತ್ತು ರೂಪಾಯಿಗಳನ್ನ ಠೇವಣಿ ಇಡಬೇಕು. ಮತ್ತು ಈ ಕೆಳಗೆ ಕಂಡ ಮುಖ್ಯ ಸಂಗತಿಗಳನ್ನು ಕಂಡು ಖಾಪಾ ಕಾಗದದಲ್ಲಿ ಮುಚ್ಚಳಿಕೆ ಬರೆದುಕೊಡಬೇಕು.

(1) ದರಖಾಸ್ತಿನಲ್ಲಿ ಕಂಡ ಪ್ರದೇಶ ಶಿವಾಯಿ ಇತರ ಕಡೆಯಲ್ಲಿ ಕತರಾವಣಿ ಮಾಡುವದಿಲ್ಲ.

(2) ಡಿಸ್ಟ್ರಿಕ್ಟ ಫಾರೆಸ್ಟ್ ಆಫಿಸರವರಿಂದ ನೇಮಕಮಾಡಲ್ಪಡುವ ಮೇರೆಗೆ ಕ್ರಮವಾಗಿ ಬಂದು ಕಡೆಯಿಂದ ಬಿದರನ್ನ ಕಡಿಯುತ್ತೇನೆ. ಕತರಾವಣಿ ಬಗ್ಗೆ ದಫಾ ಬಂದಕ್ಕೆ ಬಂದು ನೂರು ಎಕರೆಗೆ ವಿಸ್ತಾರದ ತುಕಡಿಯನ್ನ ನಿರ್ಧಾ ಮಾಡಿಸಿಕೊಂಡು ಅದರಲ್ಲಿ ಕತರಾವಣಿ ಪೂರೈಸಿದ ನಂತರ ಇನ್ನೊಂದು ತುಕಡಿಯನ್ನು ನಿರ್ಧಾ ಮಾಡಿಸಿ ಕೊಡತಕ್ಕ ಬಗ್ಗೆ ಖಾಯಿಷ್ಕಾಡುತ್ತೇನೆ.

(3) ಪ್ರತಿ ಯೊಂದು ಪೊದೆಯಲ್ಲಿಯೂ ಹಸೀ, ಯಾ ಯಳೀ ಬಿದರುಗಳನ್ನ ನಾಲ್ಕಕ್ಕೆ ಕಮ್ಮಿ ಇಲ್ಲದೆ ಬಿಟ್ಟುಬಿಟ್ಟು ನಿಂತದ್ದನ್ನ ಭೂ ಮಟ್ಟಕ್ಕೆ ಕಡಿಯುತ್ತೇನೆ.

(4) ನಾನು ಕಡಿಯುವ ಬಿದರುಗಳ ಪೈಕಿ ಹಸೀದಾಗಲಿ, ಬಣಗಿದ್ದಾಗಲಿ ಕೆಲವು ಅದದುಗಳನ್ನ ಹಾಸಲು ಕೊಟ್ಟು ಸಾಗಿಸಿಕೊಂಡು ಹೋಗಲು ಇಚ್ಛೈಪಡದೆ ಇರುವ ಸಂದರ್ಭದಲ್ಲಿ ಅಂಥಾ ಗಳುಗಳನ್ನ ಗಾಡೀ ಸಂಚಾರಕ್ಕೆ ಅನುಕೂಲವಾದ ಪ್ರದೇಶಗಳಲ್ಲಿ ಜಮಾಯಿಸಿಕೊಡುತ್ತೇನೆ.

(5) ಹಾಸಲು ಪಾವತಿ ಮಾಡಿ ಸಾಗಿಸಿಕೊಂಡು ಹೋಗಬೇಕೆಂದು ನಾನು ಉದ್ದೇಶಿಸುವ ವಿಶಿಷ್ಟ ಗಳುಗಳನ್ನೂ, ಡಿಸ್ಟ್ರಿಕ್ಟ ಫಾರೆಸ್ಟ್ ಆಫಿಸರವರು ಗೊತ್ತು ಮಾಡುವ ಜಾಗಗಳಲ್ಲಿ ಎಣಿಕೆಗೆ ಅನುಕೂಲವಾಗುವ ರೀತ್ಯಾ ಜಮಾಯಿಸಿ ಇಡುತ್ತೇನೆ.

(6) ಹೀಗೆ ನಾನು ಜಮಾಯಿಸಿ ಇಡುವ, ಗಳುಗಳನ್ನ ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರವರು ಅಥವಾ ಅವರಿಂದ ಗೊತ್ತುಮಾಡಲ್ಪಡುವ ಹುದ್ದೇದಾರ್‌ರು ಎಣಿಕೆ ಮಾಡಿದ ನಂತರ ನಾನು ಬಿಪ್ಪುಕೊಂಡ, ದರದ ಮೇರೆಗೆ ಪಾವತಿ ಮಾಡಬೇಕಾದ ಖರೀದಿ ಮೊಬಲಗನ್ನ ಲೆಟರ್ ಆಫ್ ಅಡ್ವೈಸ್, ಅಥವಾ ಚಲನಿನ ಬಡನೆ ಸಮಿತಿಯ ಖಜಾನೆಗೆ ಇರಸಾಲ್ಮಾಡಿ, ರಸೀತಿ ಹಾಜರ್ಪಡಿಸಿ, ನೆಟ್ಟನಿಂದ, ಗಳುಗಳನ್ನ ಸಾಗಿಸಿಕೊಂಡು ಹೋಗತಕ್ಕ ಬಗ್ಗೆ ರಹದಾರಿ ಪಡೆಯುತ್ತೇನೆ.

(7) ತೀರ್ವೆ ಪಾವತಿಯಾದ, ಗಳುಗಳನ್ನ ನೆಟ್ಟನಿಂದ ನಿಶ್ಶೇಷವಾಗಿ ಸಾಗಿಸಿಕೊಂಡು ಹೋದ ಹೊರತು, ಜಂಗ್ಲಿಯಿಂದ ಯಾವ, ಗಳುವನ್ನೂ ಹೊಸದಾಗಿ ತೆಗೆದುಕೊಂಡು ಬಂದು ನೆಟ್ಟನಲ್ಲಿ ಇಡುವದಿಲ್ಲ. ಮತ್ತು ಹಾಸಲು ಪಾವತಿಯಾದ, ಗಳುವನ್ನು, ರಹದಾರಿ ಕೊಟ್ಟ ತಾರೀಖು ಲಾಗಾಯ್ತು ಹದಿನೈದು ದಿವಸಗಳ ವಳಗಾಗಿ ನೆಟ್ಟನಿಂದ ಸಾಗಿಸಿಕೊಂಡು ಹೋಗುತ್ತೇನೆ.

(8) ನನ್ನ ಕರಾರ್ ವಾಯಿದೆ ಕಳೆದ ನಂತರ ನನ್ನ ಬಾಬತು ಡಿಪಾಜಿಟ್ ಮೊಬಲಗು ಮೂರು ನೂರು ರೂಪಾಯಿಗಳನ್ನ ಸರ್ಕಾರದಿಂದ ವಾಪಸು ತೆಗದುಕೊಳ್ಳುತ್ತೇನೆ. ಅಥವಾ ಕರಾರಿನ ಕೊನೆ ಮೂರು ತಿಂಗಳುಗಳಲ್ಲಿ ನನ್ನಿಂದ ಬರಬೇಕಾಗುವಮೊಬಲಗ್ಯಾಗಿ ಸದರೀ ಡಿಪಾಜಿಟ್ ಮೊಬಲಗನ್ನ ಸರ್ಕಾರದವರು ಉತ್ತಾರ ಹಾಕಿಕೊಳ್ಳಬಹುದು.

(9) ನನ್ನಿಂದ ಅಥವಾ ನನ್ನ ಕಡೆ ಜನಗಳಿಂದ ಯಾವ ಕಾರಣದಿಂದಲಾಗಲಿ ಸರ್ಕಾರಕ್ಕೆ ಏನಾದರೂ ನಷ್ಟ ಸಂಭವಿಸಿದಲ್ಲಿ ಅದಕ್ಕೆ ನಾನು ಜವಾಬ್ ಮಾಡತಕ್ಕವನು.

(10) ಮೇಲ್ಕಂಡ ಪರತ್ತುಗಳ ಪೈಕಿ ಯಾವದನ್ನಾದರೂ ಉಲ್ಲಂಘಿಸಿ ನಡೆದಲ್ಲಿ ಡೆಪ್ಯುಟಿ ಕಮ್ಮಿಷನರವರು ನನ್ನ ಕರಾರನ್ನ ರದ್ದುಮಾಡಿ ನಾನು ಜಮಾಯಿಸಿ ಇಟ್ಟುಕೊಂಡಿರುವ, ಗಳುಗಳನ್ನೂ ಜಪ್ತು ಮಾಡಬಹುದು. ಮತ್ತು ಅಂಥಾ ತಪ್ಪುತಕ್ತಾಗಿ ಮೇಲ್ಕಂಡ ಸೆಕ್ಯೂರಿಟಿ ಮೊಬಲಗನ್ನ ಪೂರ್ತಿಯಾಗಿಯಾಗಲಿ ಆ ಪೈಕಿ ಬಂದು ಭಾಗವನ್ನಾಗಲಿ ಸರ್ಕಾರಕ್ಕೆ ದಂಡವಾಗಿ ಕೊಡಲುಳ್ಳವನಲ್ಲದೆ ಕ್ರಿಮಿನಲ್ ತರಫ್ ವಿಚಾರಣೆಗೂ ಸಹ ಗುರಿಯಾಗುತ್ತೇನೆ.

ಬಿ. ರಾಮಸ್ವಾಮಯ್ಯರ್,
ಕೋಲಾರ್ ಡಿಸ್ಟ್ರಿಕ್ಟ ಫಾರೆಸ್ಟ್ ಆಫಿಸರ್.